**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.1.**

ಸಂಖ್ಯೆ. ಸಿ.4(6) (4) ಪ್ರೌ.ಶಿ. ದೈ.ಶಿ. ಗ್ರೇಡ್-1/ವೃ.ಶಿ./ಜೇ.ಪಟ್ಟಿ/14/2018-19. ದಿನಾಂಕ. 11/09/2019.

ಅತಿ ತುರ್ತು

**ಸುತ್ತೋಲೆ**

ವಿಷಯ: ಸರ್ಕಾರಿ ಪ್ರೌಢ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರು, ವೃತ್ತಿ ಶಿಕ್ಷಕರು ಹಾಗೂ 371 ಜೆ ಪ್ರಕರಣಕ್ಕೆ ಸಂಬಂಧಿಸಿದ ಶಿಕ್ಷಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ. ದಿನಾಂಕ. 20/5/2019.
2.. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ.16/08/2019.
3. ಜಂಟಿ ನಿರ್ದೇಶಕರು (ಆಡಳಿತ) ಇವರ ಪತ್ರ ಸಂಖ್ಯೆ. ಸಿ1(6) ಗ್ರೇಡ್-1 ದೈ.ಶಿ. ಬಡ್ತಿ / 69/2019-20 ದಿನಾಂಕ.16/08/2019.

----

ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪ್ರೌಢಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರು, ಚಿತ್ರಕಲಾ ಶಿಕ್ಷಕರು, ವೃತ್ತಿ ಶಿಕ್ಷಕರು ಹಾಗೂ 371 ಜೆ ಪ್ರಕರಣಕ್ಕೆ ಸಂಬಂಧಿಸಿದ ಶಿಕ್ಷಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ-1 ರ ಸುತ್ತೋಲೆಯಲ್ಲಿ ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) ರವರ ಕಛೇರಿಯ ನೋಡಲ್ ಅಧಿಕಾರಿ ಹಾಗು ಸಿಬ್ಬಂದಿಗಳು ಖುದ್ದಾಗಿ ಈ ಕಛೇರಿಗೆ ಹಾಜರಾಗಿ ಅಗತ್ಯ ಮಾಹಿತಿ / ದಾಖಲೆಗಳನ್ನು ಜೇಷ್ಠತಾ ಪಟ್ಟಿ ಪರಿಷ್ಕರಣೆಗಾಗಿ ನೀಡಲು ತಿಳಿಸಲಾಗಿತ್ತು.

ವಿವಿಧ ಜಿಲ್ಲೆಗಳಿಂದ ಬಂದ ಮಾಹಿತಿ/ದಾಖಲೆಗಳ ಆಧಾರದ ಮೇಲೆ ಜೇಷ್ಠತಾ ಪಟ್ಟಿಯಲ್ಲಿ ಪರಿಷ್ಕರಿಸಲಾಗಿದ್ದು, 2019-20 ನೇ ಸಾಲಿನ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಉಲ್ಲೇಖ-2 ರ ಪತ್ರದಲ್ಲಿ ಜಂಟಿ ನಿರ್ದೇಶಕರು (ಆಡಳಿತ) ರವರಿಗೆ ಸಲ್ಲಿಸಲಾಗಿತ್ತು. ಉಲ್ಲೇಖ-3 ರ ಪತ್ರದಲ್ಲಿ ಜಂಟಿ ನಿರ್ದೇಶಕರು (ಆಡಳಿತ) ರವರು ದೈಹಿಕ ಶಿಕ್ಷಣ ಶಿಕ್ಷಕರು, ಚಿತ್ರಕಲಾ ಶಿಕ್ಷಕರು, ವೃತ್ತಿ ಶಿಕ್ಷಕರು ಹಾಗೂ 371 ಜೆ ಪ್ರಕರಣಕ್ಕೆ ಸಂಬಂಧಿಸಿದ ಶಿಕ್ಷಕರಿಗೆ ಬಡ್ತಿ ನೀಡುವ ಸಲುವಾಗಿ ಅಂತಿಮ ಜೇಷ್ಠತಾ ಪಟ್ಟಿ ಕಳುಹಿಸಲು ಕೋರಿರುತ್ತಾರೆ. ಆದುದರಿಂದ, 2019-20 ರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈ ಕೆಳಕಂಡ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ:

| ಕ್ರ.ಸಂ. | ಶಿಕ್ಷಕರು | ವೆಬ್ ಸೈಟ್ ವಿಳಾಸ |
|---|---|---|
| 1. | ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 | http://www.schooleducation.kar.nic.in/secpdfs/HSTrsSeniority/HSPEGr1FSL_1920. |
| 2. | ಚಿತ್ರಕಲಾ ಶಿಕ್ಷಕರು | http://www.schooleducation.kar.nic.in/Secpdfs/HSTrsSeniority/HSDrawTrs_TSL1920 |
| 3. | ವೃತ್ತಿ ಶಿಕ್ಷಕರು | http://www.schooleducation.kar.nic.in/Secpdfs/HSTrsSeniority/HSDDM_FSL1920 |

ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಜೇಷ್ಠತಾ ಪಟ್ಟಿಗಳಲ್ಲಿ ನ್ಯೂನತೆಗಳಿದ್ದಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಲು ಸಂಬಂಧಪಟ್ಟ ಅಧೀಕ್ಷಕರು/ಸಿಬ್ಬಂದಿಯನ್ನು ವಿಭಾಗವಾರು ಸೂಚಿಸಿರುವ ದಿನಾಂಕಗಳಂದು ಈ ಕಛೇರಿಗೆ ನಿಯೋಜಿಸಿ ಪಟ್ಟಿಯನ್ನು ಪರಿಷ್ಕರಿಸಲು ಸೂಚಿಸಿದೆ.

| ಕ್ರ.ಸಂ | ವಿಭಾಗ | ಜೇಷ್ಠತಾ ಪಟ್ಟಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸಲು ನಿಗಧಿಪಡಿಸಿದ ದಿನಾಂಕ. |
|---|---|---|
| 1. | ಬೆಂಗಳೂರು ವಿಭಾಗ | 16-9-2019 ರಿಂದ 18/9/2019 |
| 2. | ಮೈಸೂರು ವಿಭಾಗ | 19/9/2019 ರಿಂದ 21/9/2019 |
| 3 | ಗುಲ್ಬರ್ಗಾ ವಿಭಾಗ | 23/9/2019 ರಿಂದ 25/9/2019 |
| 4. | ಬೆಳಗಾಂ ವಿಭಾಗ | 26/9/2019 ರಿಂದ 30/9/2019 |

ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಸದರಿ ವಿಷಯವನ್ನು ತುರ್ತು ಎಂದು ಭಾವಿಸಿ ಸಂಬಂಧಪಟ್ಟ ಸಿಬ್ಬಂದಿಯನ್ನು ಈ ಕಛೇರಿಗೆ ನಿಯೋಜಿಸಿ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವ ಬಗ್ಗೆ ಸಹಕರಿಸುವುದು. ತಪ್ಪಿದ್ದಲ್ಲಿ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರ ಹೆಸರನ್ನು ಮಾನ್ಯ ಆಯುಕ್ತರ ಗಮನಕ್ಕೆ ತರಲಾಗುವುದು.

ನಿರ್ದೇಶಕರು (ಪ್ರೌಢ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.1.

ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾ.ಶಿ.ಇ. ರವರಿಗೆ ಅಗತ್ಯ ಕ್ರಮಕ್ಕಾಗಿ.